

# ಅಪರೂಪದ ಎಣ್ಣೆ ಗಿಂಡಿ

ನೂರಾರು ವರ್ಷಗಳ ಹಿಂದೆ ವಿದ್ಯುತ್ ಸಂಪರ್ಕ ಇಲ್ಲದ ಆ ದಿನಗಳಲ್ಲಿ ರಾತ್ರಿಯ ಹೊತ್ತು ಹೊರಗೆ ಹೋಗಬೇಕಾದರೆ ರಸ್ತೆ ಕಾಣಲು ದೀವಟಿಗೆಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ದೂರದ ಪ್ರಯಾಣ ಮಾಡಬೇಕಾದಾಗ ಕಂದೀಲುಗಳು, ನಿರಂತರವಾಗಿ ಉರಿಯಲು ಪಂಜಿನ ಜೊತೆಗೆ ಎಣ್ಣೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಅದಕ್ಕಾಗಿಯೇ ಈ ರೀತಿಯ ಎಣ್ಣೆಯ ಗಿಂಡಿಗಳನ್ನು ಜೊತೆಗೆ ಒಯ್ಯುತ್ತಿದ್ದರು. ಸುಮಾರು ಇನ್ನೂರು ವರ್ಷಗಳಷ್ಟು ಹಳೆಯದಾದ ಹಿತ್ತಾಳೆಯ ಈ ಗಿಂಡಿಯಲ್ಲಿ ಸುಮಾರು ಎರಡು ಲೀಟರ್‌ನಷ್ಟು ಎಣ್ಣೆ ಹಿಡಿಯುತ್ತದೆ. ನಳಿಕೆ ಆಕಾರದ ತುದಿಯಿಂದ ಪಂಜಿಗೆ ಎಣ್ಣೆ ಹಾಕಲು ಅನುಕೂಲವಾಗಿರುವ ಈ ಸಲಕರಣೆಯು ಸಖರಾಯಪಟ್ಟಣದ ನಾಯಕ್ ರಾಮಸ್ವಾಮಿಯವರ ಮನೆಯಲ್ಲಿ ಇಂದಿಗೂ ಸುಸ್ಥಿತಿಯಲ್ಲಿ ಮನೆಯ ಹಳೆಯ ವಸ್ತುಗಳ ಸಂಗ್ರಹದಲ್ಲಿದೆ.

**-ಸವಿತಾ ಸಚ್ಚಿದಾನಂದ, ಸಖರಾಯಪಟ್ಟಣ**

# ಈ ಪರಿಯ ಅಳಿಲು ಸೇವೆ..!

ಮೈಸೂರಿನ ಬಸವೇಶ್ವರ ವೃತ್ತದ ಸಮೀಪವಿರುವ ಸಾರ್ವಜನಿಕ ಆಡಳಿತ ಕಚೇರಿಯ ಆವರಣದಲ್ಲಿ ಬಹಳ ವರ್ಷಗಳಿಂದ ರಾಜಣ್ಣ ಎಂಬುವವರು ಟೀ ಅಂಗಡಿ ನಡೆಸುತ್ತಿದ್ದಾರೆ. ಅವರು ನಿತ್ಯ ಬೆಳಿಗ್ಗೆ ತಾವು ತಯಾರಿಸಿದ ತಿಂಡಿ–ತಿನಿಸುಗಳನ್ನು ಮೊದಲು ಪ್ಲಾಸ್ಟಿಕ್ ಬಾಟಲ್ ಒಂದರಲ್ಲಿ ಹಾಕುತ್ತಾರೆ. ಮತ್ತೊಂದರಲ್ಲಿ ನೀರನ್ನು ಹಾಕಿ ಅವನ್ನು ಮರದಲ್ಲಿ ನೇತು ಹಾಕುತ್ತಾರೆ. ಅದನ್ನೇ ಕಾಯುತ್ತಿದ್ದವರಂತೆ ಓಡೋಡಿ ಬರುವ ಅಳಿಲುಗಳು ತಿಂಡಿ ತಿನ್ನಲು ಪ್ರಾರಂಭಿಸಿದರೆ ಇತ್ತ ರಾಜಣ್ಣನ ಅಂದಿನ ವ್ಯಾಪಾರಕ್ಕೆ ಚಾಲನೆ ಸಿಕ್ಕಂತೆಯೇ ಸರಿ.

ಟೀ ಗಾಡಿಯಲ್ಲಿ ವ್ಯಾಪಾರ ಮಾಡುವ ರಾಜಣ್ಣನ ಒಂದು ಕಣ್ಣು ಗಿರಾಕಿಗಳ ಮೇಲೆ ಇದ್ದರೆ ಮತ್ತೊಂದು ಮರದ ಮೇಲಿನ ಅಳಿಲುಗಳ ಮೇಲೆ ನೆಟ್ಟಿರುತ್ತದೆ. ಈ ಪರಿಯ ಅಳಿಲು ಸೇವೆ ಇತರರಿಗೂ ಮಾದರಿಯಾಗುವಂತಿದೆ.

**- ಮ.ಗು.ಬಸವಣ್ಣ, ನಂಜನಗೂಡು**





# ಇಸ್ಪೀಟ್‌ನಲ್ಲಿ ಬುರ್ಜ್ ಖಲೀಫಾ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸಣ್ಣಳ್ಳಿ ಗ್ರಾಮದ ಅನೂಪ್ ವಿ. ಹೆಗಡೆ ಎಂಬುವವರು ಹಳೆಯ ಇಸ್ಪೀಟ್ ಕಾರ್ಡುಗಳಿಂದ ಸುಮಾರು 27 ಮಹಡಿಗಳಿರುವ ಎತ್ತರದ ಕಟ್ಟಡವನ್ನು ನಿರ್ಮಿಸಿದ್ದಾರೆ. ಅದರ ಪಕ್ಕದಲ್ಲಿ ಎರಡು ಪುಟ್ಟ ಕಟ್ಟಡವನ್ನೂ ಕಟ್ಟಿದ್ದಾರೆ. ಇದನ್ನು ನೋಡಿದವರೆಲ್ಲರೂ ಮಾರುಹೋಗಿ, ದುಬೈನಲ್ಲಿರುವ ಬುರ್ಜ್ ಖಲೀಫಾ ಕಟ್ಟಡದೊಂದಿಗೆ ಹೋಲಿಸುತ್ತಿದ್ದಾರೆ. ಇದನ್ನು ಅವರು ಕೇವಲ ಒಂದು ದಿನದಲ್ಲಿ ಮಾಡಿದ್ದು, ಅವರ ಪರಿಶ್ರಮಕ್ಕೆ ನಾವು ತಲೆ ಬಾಗಲೇಬೇಕು.

**- ನಿಧಿ ಪ್ರಸನ್ನ, ಉಡುಪಿ**